ಸಿಸಿ ನಂಃ 54/2025

ಪಿ .ಡಬ್ಲು-1

ಸಾಕ್ಷಿಯನ್ನು ದಿನಾಂಕಃ 21.02.2026 ರಂದು ಕರೆಸಿ ಪ್ರಮಾಣವಚನ ಭೋದಿಸಲಾಯಿತು.

**ಮುಂದುವರೆದ ಪಾಟೀ ಸವಾಲು ಃ- ಅರೋಪಿ ಪರ ಶ್ರೀ. ಹೆಚ್ ಎಸ್ ಎನ್ ವಕೀಲರಿಂದ**

ಅರೋಪಿಯು ನಿಮ್ಮ ಬಳಿ ಎಷ್ಟು ಬಾರಿ ವ್ಯಾಪಾರ ಮಾಡಿರುತ್ತಾರೆ ಎಂದರೆ 2-3 ಬಾರಿ ವ್ಯಾಪಾರ ಮಾಡಿರುತ್ತಾರೆ ಮುಂದುವರೆದು ಅರೋಪಿ ಹಾಗೂ ಅತನ ಸಹೋದರ ವ್ಯಾಪಾರ ಮಾಡುತ್ತಿದ್ದರು. ವ್ಯವಹಾರ ಮಾಡಿರುವ ಬಗ್ಗೆ ಅರೋಪಿಗೆ ದಾಖಲೆ ನೀಡಿರುತ್ತೀರಾ ಎಂದರೆ ಹೌದು. ವ್ಯವಹಾರದಲ್ಲಿ ಮೂಲ ಬಿಲ್ಲನ್ನು ಖರೀದಿದಾರರಿಗೆ ನೀಡಿ ಕಾರ್ಬನ್ ಪ್ರತಿಯನ್ನು ಮಾರಾಟ ಗಾರರು ಇಟ್ಟುಕೊಂಡಿರುತ್ತಾರೆ ಎಂದರೆ ಸರಿಯಲ್ಲ. ಅರೋಪಿ ಎಷ್ಟು ಕಡಳೇ ಬೀಜ ಖರೀದಿ ಮಾಡಿರುತ್ತಾರೆ ಎಂದರೆ ಈಗ ಹೇಳಲಾಗುವುದಿಲ್ಲ. 2024 ನೇ ಅದಾಯ ತೆರಿಗೆ ರೀಟರ್ನ್ಸ್ ನಲ್ಲಿ ಅರೋಪಿಯಾಂದಿಗೆ ಮಾಡಿದ ವ್ಯವಹಾರವನ್ನು ತೋರಿಸಿರುತ್ತೀರಾ ಎಂದರೆ ಇಲ್ಲ.

ನಿಪಿ 1 ರಲ್ಲಿರುವ ಬರವಣಿಗೆಗಳು ಬೇರೆ ಬೇರೆ ರೀತಿಯಲ್ಲಿ ಇದೆ ಎಂದರೆ ನನಗೆ ಗೊತ್ತಿಲ್ಲ. ನಿಪಿ1 ರಲ್ಲಿರುವ ಸಹಿ ಅರೋಪಿಯದ್ದಲ್ಲ ಎಂದರೆ ನಾನು ನೋಡಿರುವುದಿಲ್ಲ. ನಿಪಿ 5 ರಲ್ಲಿರುವ ಅರೋಪಿಯ ಸಹಿ ಇರುವುದಿಲ್ಲ ಎಂದರೆ ಗೊತ್ತಿಲ್ಲ. ಅರೋಪಿಗೆ ವಕೀಲರ ಮೂಲಕ ನೀಡಿದ ನೋಟಿಸ್ಸು ಜಾರಿಯಾಗಿಲ್ಲ ಎಂದರೆ ಗೊತ್ತಿಲ್ಲ. ಅರೋಪಿಗೂ ನಿಮಗೂ ಯಾವುದೇ ವ್ಯವಹಾರ ಅಗಿರುವುದಿಲ್ಲ ನೀವು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೀರಿ ಎಂದರೆ ಸರಿಯಲ್ಲ. ಅರೋಪಿ ಕಡಳೇ ಕಾಯಿ ಬೀಜ ವ್ಯಾಪಾರ ಮಾಡುವುದಿಲ್ಲ ಎಂದರೆ ಸರಿಯಲ್ಲ. ಅರೋಪಿಯ ಹಾಗೂ ಅತನ ಅಣ್ಣ ಇಬ್ಬರೂ ಸೇರಿ ಮಾಡುತ್ತಾರೆ. ಅರೋಪಿಯು ಪೋಲಿಸ್ ಠಾಣೆಯ ಎದುರು ದ್ವಿಚಕ್ರ ವಾಹನದ ಶೀಟ್ ಕವಲ್ ಅಂಗಡಿಯಲ್ಲಿ ಕೆಸಲ ಮಾಡುತ್ತಾರೆ ಎಂದರೆ ನಾನು ನೋಡಿರುವುದಿಲ್ಲ. ಅರೋಪಿಗೆ ಸೇರಿದ ಚೆಕ್ ನ್ನು ದುರುಪಯೋಗ ಪಡಿಸಿಕೊಂಡಿರುತ್ತೇನೆ ಎಂದರೆ ಸರಿಯಲ್ಲ. ನಿಪಿ 1 ನ್ನು ನಿಮಗೆ ನೀಡಿಲ್ಲ ಎಂದರೆ ಸರಿಯಲ್ಲ. ಅರೋಪಿಯು ನಿಮಗೆ ಯಾವುದೇ ಹಣವನ್ನು ನೀಡಬೇಕಾಗಿಲ್ಲ ಎಂದರೆ ಸರಿಯಲ್ಲ.

-

**ಮರು ವಿಚಾರಣೆಃ- ಇಲ್ಲ.**

***(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಗಣಕೀಕೃತಗೊಳಿಸಲಾಗಿದೆ)***

**ಓದಿ ಹೇಳಿ ಕೇಳಿ ಸರಿ ಇದೆ,**

**ಸಹಿ/-***

***(ಹರೀಶ್. ಜಿ )***

***ಪ್ರಧಾನ ಸಿವಿಲ್ ನ್ಯಾಯಾಧೀಶರು,***

**ಮತ್ತು ಜೆಎಂಎಫ್ ಸಿ, ಮುಳಬಾಗಿಲು**